# ಮಲಯಾಳಂ ಕಾವ್ಯಮಂಜರಿ

ಕೆಳಗೆ ಕಳಚಿ ಬೀಳುವ ಸೊಂಟ ಸುತ್ತಿದ ಟವಲನ್ನು,
ಚೆಲ್ಲಾಪಿಲ್ಲಿ ಚಿಮ್ಮುವಂತೆ ಮೂತ್ರಿಸುವ ಅವನ
ಶೈಲಿಯನ್ನು.
ಅವನನ್ನು ಗಂಡಸನ್ನಾಗಿಸಬಲ್ಲ
ಕೇವಲ ನಿನ್ನ ಗಂಡಸಾಗಿರಬಲ್ಲ,
ಎಲ್ಲಾ ಕುತೂಹಲಭರಿತ ವಿಶದಾಂಶಗಳನ್ನು
ಅವನಿಗೆ ಕೊಡು ಕೊಡುಗೆ
ನಿನ್ನನ್ನು ಹೆಣ್ಣಾಗಿಸಬಲ್ಲ ಎಲ್ಲವನ್ನೂ
ನೀಡು ಕಾಣಿಕೆ:
ನೀಳ ಸಮೃದ್ಧ ಕೂದಲ ಪರಿಮಳವನ್ನು
ಮೊಲೆಗಳೆಡೆಯ ಬೆವರಿನ ಕಸ್ತೂರಿ ಗಂಧವನ್ನು
ಮುಟ್ಟು ನೆತ್ತರ ಬೆಚ್ಚನೆಯ ಬೆಡಗನ್ನು
ಕೊನೆಯಿರದ ನಿನ್ನ ಹೆಣ್ಣುತನದ ಎಲ್ಲಾ ಹಸಿವುಗಳನ್ನು.
ಹೌದು,
ಪ್ರೀತಿಸುವುದಕ್ಕೊಬ್ಬ ಗಂಡಸು ಸುಲಭವಾಗಿ ಸಿಗಬಲ್ಲ.
ಆದರೆ, ತದನಂತರದ ಬದುಕು ಅವನಿಲ್ಲದೇ
ಒಬ್ಬಂಟಿ ಎದುರಿಸಬೇಕಾಗುತ್ತದೆ.
ಹುಡುಕಾಟಗಳ ಕಡೆಗಣಿಸಿದ
ಕಣ್ಣುಗಳೊಂದಿಗೆ,
ನಿನ್ನ ಹೆಸರ ಉಚ್ಚರಿಸಿ ಕರೆಯುವ
ಅವನ ಕೊನೆಯ ಶಬ್ದ ಆಲಿಸಿದ
ಕಿವಿಗಳೊಂದಿಗೆ,
ಒಮ್ಮೆ ಅವನ ಸ್ಪರ್ಶದಿಂದ
ಬಿಳಿಯ ಕಂಚಿನಂತೆ ಥಳಥಳಿಸಿದ
ಇದೀಗ ಬಣ್ಣಗೆಟ್ಟು ತಬ್ಬಲಿಯಾಗಿರುವ
ದೇಹದೊಂದಿಗೆ,
ನೀನು ನಾಲ್ಕಾರು ಕಡೆ ಸುಳಿದಾಡುವಾಗ
ಅಪರಿಚಿತರನ್ನು ಭೇಟಿಯಾಗುವಾಗ
ಜೀವವಿಲ್ಲದಂತಾಗುವ ಒಂದು ಬದುಕು
ನಿನ್ನ ಬದುಕು.

